ಮುಗಿಯುತ್ತಾ, ಮುಗುಳ್ನಗುತ್ತಾ ಮತಭಿಕ್ಷೆ ಬೇಡಿದ್ದಾಗಿತ್ತು. ಸಾಕಾಗಿತ್ತು ರಾತ್ರಿ ಮಲಗಿದ್ದಾಗ ದೇಹಕ್ಕೆ ಸಾಕಾಗಿದ್ದರೂ ಮನಸ್ಸು ನಿದ್ದೆಗೆ ಜಾರಲು ಮೊಂಡು ಮಾಡುತಿತ್ತು... ಬೇಡ ಬೇಡವೆಂದರೂ ಇವರು ಮಾಡುತ್ತಿದ್ದ ಫೋನ್ ಕಾಲ್‌ಗಳ, ಆಡುತ್ತಿದ್ದ ಮಾತುಗಳು ಬಿಟ್ಟು ಹೋಗಬೇಕೆನ್ನುವ ನನ್ನ ನಿರ್ಧಾರವನ್ನು ಗಟ್ಟಿ ಮಾಡುತ್ತಿತ್ತು. ರಾತ್ರಿಯ ಹೊತ್ತು ಎಲ್ಲೆಲ್ಲಿ ಎಷ್ಟೆಷ್ಟು ಬಾಟಲ್‌ಗಳು ಸರಬರಾಜು ಆಗಬೇಕು... ಐನೂರು ರೂಪಾಯಿ ನೋಟಾ... ಸಾವಿರ ರೂಪಾಯಿಯ ನೋಟಾ?.. ಸಾಬರ ಕೇರಿಯಲ್ಲಿ ಮುಲ್ಲಾಗೆ ಕೊಟ್ಟರೆ ಅವನು ಎಲ್ಲರಿಗೂ ಕೊಡುತ್ತಾನಾ? ಅವನು ನಿಯತ್ತಿನ ಮನುಷ್ಯನಾ? ವಿರುದ್ಧ ನಿಂತಿರುವ ಪುಟ್ಟನರಸಯ್ಯನ ಪಟ್ಟ ಶಿಷ್ಯನನ್ನು ಎಷ್ಟಕ್ಕೆ ಕೊಂಡುಕೊಳ್ಳಬಹುದು.. ಹೆಂಗಸರಿಗೆ ಸೀರೆ ಕೊಡುವುದಾ? ಕುಕ್ಕರ್ ಕೊಡುವುದಾ?... ಸೀರೆಗಳನ್ನು ಶೆಟ್ಟಿ ಬಿಟ್ಟಿ ಕೊಟ್ಟರೆ ಅವನಿಗೆ ಇಂಗ್ಲಿಷ್ ಶಾಲೆ ಶುರು ಮಾಡಲು ಪರವಾನಗಿ ಕೊಡಬೇಕು...

ಒಂದೇ ಎರಡೇ... ರಾಜಕೀಯದ ಒಳಗುಟ್ಟುಗಳು..!.. ಗೆಲುವುದು ಹೀಗೇ ಎನ್ನುವುದಾದರೆ ದಿನಾ ಬೆಳಗ್ಗೆಯಿಂದ ರಾತ್ರಿಯವರೆಗೂ ಬೀದಿ ಬೀದಿ ಓಡಾಡುವುದೇಕೆ? ವೋಟು ಕೊಡಿ ಎಂದು ಬೇಡುವುದೇಕೆ?... ಕಾಟನ್ ಸೀರೆ ಉಟ್ಟು, ಗಾಜಿನ ಬಳೆ ತೊಟ್ಟು, ದೊಡ್ಡ ಕೆಂಪು ಕುಂಕುಮದ ಬೊಟ್ಟು ಇಟ್ಟುಕೊಂಡು ನಾನು ಇವರ ಹಿಂದೆ ಹೋಗುವುದೇಕೆ?

ಸುಸ್ತು ಪ್ರಶ್ನಿಸಲೂ ಸುಸ್ತು ಜೊತೆಗೆ ಬೇಕಿಲ್ಲ... ಇದು ಆಶ್ಚರ್ಯವೇನು ಇಲ್ಲ... ಗೊತ್ತಿತ್ತು... ಆಗುವುದೇ ಹೀಗೆ ಎಂದು... ರಾಜಕರಣವೇ ಇಷ್ಟು ಅದಕ್ಕಾಗಿಯೇ ಅಲ್ಲವೇ ಬಿಟ್ಟು ಹೋಗುವ ನಿರ್ಧಾರ. ದಿಂಬಿನ ಪಕ್ಕವೇ ಇದ್ದ ಫೋನ್ ಕುಣಿಯಿತು... ಕೈಗೆತ್ತಿಕೊಂಡು ನೋಡಿದೆ. ವಿಶ್ವಾಸ್! ಬಟನ್ ಪ್ರೆಸ್ ಮಾಡಿ ಕಿವಿಗಿಟ್ಟುಕೊಂಡೆ. ಇವರು ಕೋಣೆಯಲ್ಲಿ ಇರಲಿಲ್ಲ.

'ಹಲೋ...'

'ಹಲೋ ಗುಡ್ ಮಾರ್ನಿಂಗ್... ಇವತ್ತು ಕ್ಯಾನ್ವಾಸಿಂಗ್ ಇಲ್ವ? '

'ಹೂಂ... ಇಲ್ಲ...'

'ನನ್ನ ಕ್ಲಾಸೆಸ್ ಮುಗಿದು ಎರಡು ದಿನ ಆಯ್ತು.. ನಿಮ್ಮ ಅಸಿಸ್ಟೆಂಟ್ ಮೀರಾ.. ನೀವು ಹೊರಡಿ.. ನಾನು ಹೋಟೇಲ್ ಬಿಲ್ ಸೆಟಲ್ ಮಾಡಿಬಿಡ್ತೀನಿ ಅಂತ ಹೇಳ್ತಾ ಇದ್ದಾರೆ..'

'ಹೂಂ....'

'ಎರಡು ದಿನದಿಂದ ತ್ರಿವೇಣಿಯವರ ಕಾದಂಬರಿಗಳನ್ನು ಓದ್ತಾ ಕೂತಿದ್ದೀನಿ... ನೀವು ಗುಡ್ ಮಾರ್ನಿಂಗ್ ಗುಟ್ ನೈಟ್ ಬಿಟ್ಟರೆ ಮಾತೇ ಇಲ್ಲ... ಮೀರಾ..'

'ಮೀರಾ ಹೇಳಿದ್ರೆ ಹೋಗಿಬಿಡ್ತೀರಾ?'

'ಈಗ ನೀವು ಹೇಳಿದ್ರೂ ಹೋಗಲ್ಲ... ತೆಲುಗಿನಲ್ಲಿ ಒಂದು ಪಿಚ್ಚರ್ ಬಂದಿತ್ತು.. ಲೇಚಿ ಪೊದಾಮು ರಾ ಅಂತ... ಓಡಿ ಹೋಗೋಣ ಬಾ ಅಂತ ಕನ್ನಡದಲ್ಲಿ ಅದನ್ನು ರೀಮೇಕ್ ಮಾಡಿದಾರಾ ಅಂತ ನಮ್ಮಮ್ಮನ್ನ ಕೇಳಬೇಕು...'

ವಿಶ್ವಾಸ್ ಬದಲಾಗೊಲ್ಲ...

'ನಿಮ್ಮಮ್ಮನ್ನ ಇನ್ನೂ ತುಂಬಾ ಕೇಳಬೇಕಾದ್ದು ಇದೆ'

'ಕೇಳಬೇಕಾದ್ದು ಹೆಚ್ಚಿಲ್ಲ... ನಿಮ್ಮನ್ನು ಜೊತೆಗೆ ಕರೆದುಕೊಂಡು ಹೋಗಿ ಹೇಳಬೇಕಾದ್ದು ಇದೆ'

ಉಗುಳು ನುಂಗಿದೆ.

'ವಿಶ್ವಾಸ್... ಇವ್ರು ಡೈವೋರ್ಸ್ ಕೊಡಲ್ಲ...'

'ಬೇಡ...'

'ಮತ್ತೆ...'

'ಈಗೇನು? ಹತ್ತು ದಿನ ಅವರೊಡನೆ ಓಡಾಡಿ... ಇಷ್ಟ ಆಗಿ ಹೋಯ್ತಾ? ಅಧಿಕಾರ ಜನಮನ್ನಣೆ, ದೊಡ್ಡವರ ಒಡನಾಟ...'

ಅವನ ಮಾತನ್ನು ತಡೆದೆ.

'ವಿಶ್ವಾಸ್... ಈ ಹತ್ತು ದಿನಗಳ ಓಡಾಟ.. ಬಿಟ್ಟು ಹೋಗುವ ನನ್ನ ನಿರ್ಧಾರವನ್ನು ಗಟ್ಟಿ ಮಾಡಿದೆ. ಮಕ್ಕಳನ್ನು ಬಿಟ್ಟು ಹೋಗುತ್ತಿರುವೆನಲ್ಲಾ ಎಂಬ ಅಳುಕಿತ್ತು... ಅದೂ ಕಳೆಯಿತು. ನಿಮ್ಮನ್ನು ಈ ಹತ್ತು ದಿನ ನೋಡದೇ ಇದ್ದದ್ದೂ ಒಳ್ಳೆಯದೇ ಆಯಿತು.. ಐ ಮಿಸ್ಡ್ ಯೂ ಸೋ ಮಚ್... ಇಟ್ ಗೋಸ್ ಆನ್ ಟು ಪ್ರೂವ್ ಐ ಲವ್ ಯು... ಆದರೆ..'

'ಐ ಲವ್ ಯು ಮೋರ್ ದೆನ್ ಯು ಲವ್ ಮಿ...'

'ವಿಶ್ವಾಸ್!..' ಮೆಲ್ಲನೆ ಉಸುರಿದೆ...

'ಸರಿ ಹೇಳ್ರೀ.. ಆದರೆ...? ಆದರೆ ಏನು?'

'ನನ್ನ ಎಸ್.ಎಸ್.ಎಲ್.ಸಿ, ಪಿ.ಯು.ಸಿ ಮಾರ್ಕ್ಸ್ ಕಾರ್ಡ್ ತರಿಸಿ ಕೊಂಡಿದ್ದೀನಿ... ನಾನು ಮೊದಲು ಕೆಲಸಕ್ಕೆ ಸೇರಬೇಕು... ನನ್ನ ಆತ್ಮವಿಶ್ವಾಸವನ್ನು ಮೊದಲು ಗಳಿಸಿಕೊಳ್ಳಬೇಕು'

'ಈ ವಿಶ್ವಾಸ ಬೇಡವೇ?'

ಫೋನನ್ನು ಭದ್ರವಾಗಿ ಹಿಡಿದುಕೊಂಡು ಉಗುಳು ನುಂಗಿದೆ.

'ವಿಶ್ವಾಸ್ ನನಗೆ ಇಲ್ಲಿಂದ ಬಿಡುಗಡೆ ಬೇಕು. ನಿಮ್ಮನ್ನು ಭೇಟಿಯಾಗುವ ಮುನ್ನವೇ ತೆಗೆದುಕೊಂಡ ನಿರ್ಧಾರ ಅದು. ಆದರೆ ಅಂದು ನೀವು ಹೇಳಿದ್ದು ನನ್ನ ಕಾಡುತ್ತಿದೆ. ನನ್ನ ಕಂಗಳಲ್ಲಿ ನಿಮಗಾಗಿ ಇದ್ದದ್ದು ಪ್ರೀತಿ... ಆದರೆ ಅದು ನಿಜವೇ ಅಥವಾ ನಿಮ್ಮ ಭ್ರಮೆಯೇ ಎಂದು ಕೇಳಿದ್ರಿ... ಎಲ್ಲಿ ಹೋಗುವುದು.. ಏನು ಮಾಡುವುದು ಎಂಬ ನಿಮ್ಮ ಗೊಂದಲಕ್ಕೆ ನಾನು ಪರಿಹಾರವೇ? ಎಂದು ಕೇಳಿದ್ರಿ...'

'ಸುಮ್ಮನೇರೀ.. ನಿಮ್ಮನ್ನು ರೇಗಿಸಲು'

'ಇಲ್ಲ... ಐ ಆ್ಯಮ್ ಸೀರಿಯಸ್ ವಿಶ್ವಾಸ್... ನನ್ನ ಮಾತು ಪೂರಾ ಕೇಳಿ... ಇಲ್ಲಿಂದ ಹೋಗಿ ಬಿಡಬೇಕು ಎನ್ನುವ ನಿರ್ಧಾರ ನಿಮ್ಮನ್ನು ಭೇಟಿಯಾಗುವ ಮುನ್ನವೇ ತೆಗೆದುಕೊಂಡಿದ್ದು. ನಾನು ನನಗಾಗಿಯೇ ಈ ಮನೆ ಬಿಡುತ್ತೇನೆ. ನಿಮಗಾಗಿ ಇವರನ್ನು, ಈ ಮನೆಯನ್ನು ಬಿಟ್ಟು ಬರುವುದು ಬೇಡ ನಾನು ಅಂದುಕೊಂಡಿದ್ದು ಸಾಧಿಸುತ್ತೇನೆ.. ನನ್ನ ಅನ್ನ ನಾನು ಸಂಪಾದಿಸಬಲ್ಲೆ. ಒಂದು ಮನೆಯ ಸೊಸೆ, ಒಬ್ಬ ಪುರುಷನ ಹೆಂಡತಿಯಾಗಿ ಅಷ್ಟೇ ಅಲ್ಲ... ನಾನು ನಾನಾಗಿಯೇ ಬಾಳಬಲ್ಲೆ... ಎಂದು ನನಗೆ ನಾನೇ ವಿಶ್ವಾಸ ತಂದುಕೊಡಬೇಕು..'

'ಅಲ್ಲಾರೀ... ಜನ ನೂರೆಂಟು ಹೇಳ್ತಾರೆ...'

'ಹೂಂ... ಅದು ಗೊತ್ತು.. ಅದಕ್ಕೆ ನಾನು ಹೇಳಿದ್ದು ನಾನು ನಾನಾಗಿಯೇ ಬಾಳಬಲ್ಲೆ ಎಂದು ನನಗೆ ನಾನೇ ಪ್ರೂವ್ ಮಾಡಿಕೊಳ್ಳಬೇಕು... ನಾಲ್ಕು ಜನರಿಗೆ ಅಲ್ಲ...'

'ಹೂಂ...'

ಉಗುಳು ನುಂಗಿ, ಎರಡು ನಿಮಿಷ ಸಾವರಿಸಿಕೊಂಡೆ.

'ಏನು ಹೂಂ... ಅಂದ್ರೆ?'

'ಒಪ್ಪಿಕೊಂಡೆ ಅಂತ'

'ನಂಗೆ ಸಹಾಯ ಮಾಡಬೇಕು' ಮೆಲ್ಲನೆ ಹೇಳಿದೆ.

'ಹೂಂ... ಏನು ಮಾಡಬೇಕು ಹೇಳಿ... ನಿಮ್ಮ ಕಾಲ ಮೇಲೆ ನೀವು ನಿಂತು ಕೊಳ್ಳಬೇಕು. ನಿಮ್ಮಲ್ಲಿ ನಿಮಗೆ ನಂಬಿಕೆ ಬರಬೇಕು... ಅಗ್ರೀಡ್... ನಾನೇನು ಮಾಡಬೇಕು? ಬೆಂಗಳೂರಿನಲ್ಲಿ ನಿಮಗೆ ಒಂದು ಕೆಲಸ ಕೊಡಿಸೋದು ಕಷ್ಟವೇನಿಲ್ಲ..'

'ವಿಶ್ವಾಸ್... ಬೆಂಗಳೂರು ಬೇಡ... ಮುಂಬಯಿ, ದೆಹಲಿ... ಹಾಗೆ ಇರಲು ಒಂದು ತಾಣ...'

(ಸಶೇಷ)

**ಗತಿ**

ಕನ್ನಡ ನಾಡಲ್ಲಿ
ಕನ್ನಡವಿನ್ನೂ
ಅಂಬೆಗಾಲಿನ ಕೂಸು
ಅದಿನ್ನೂ
ಆಗಿಲ್ಲ ನಾಡಲ್ಲಿ
ಬಿಗ್‌ಬಾಸು!

–ಗೀತಾ ಶಾಸ್ತ್ರಿ

